ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಯುಜಿಸಿ/ಐಸಿಎಆರ್/ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿದ್ದು ದಿನಾಂಕ 1.7.2005 ರಿಂದ 31.12.2005ರ ಅವಧಿಯಲ್ಲಿ ನಿವೃತ್ತಿ ಹೊಂದಿದ ನಿವೃತ್ತದಾರರಿಗೆ ಪಿಂಚಣಿ ಪುನರ್ ನಿಗಧಿಪಡಿಸುವ ಬಗ್ಗೆ.

ಓದಲಾಗಿದೆ:
1. 1. ಸರ್ಕಾರಿ ಆದೇಶ ಸಂಖ್ಯೆ: ಆಇ (ವಿ) 03 ಪಿಇಎನ್ 2007(11) ದಿನಾಂಕ: 06-06-2007.
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 37 ಯುಎನ್‌ಇ 2009 ದಿನಾಂಕ 24-12-2009.
3. ಸರ್ಕಾರಿ ಆದೇಶ ಸಂಖ್ಯೆ: ಎಹೆಚ್‌ಡಿ 64 ಎಯುಎಂ 2009 ದಿನಾಂಕ 24-03-2010
4. ಸರ್ಕಾರಿ ಆದೇಶ ಸಂಖ್ಯೆ: ಎಹೆಚ್‌ಎಫ್ 106 ವಿಇಟಿ 2009 ದಿನಾಂಕ 24-05-2010

---

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ 6.6.2007ರ ಸರ್ಕಾರಿ ಆದೇಶದಲ್ಲಿ ಐದನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳಂತೆ ದಿನಾಂಕ: 1.7.2005 ರ ಪೂರ್ವದಲ್ಲಿ ಅಥವಾ ಆನಂತರದ ನಿವೃತ್ತಿಯಿಂದ ಅಥವಾ ಸೇವಾವಧಿಯಲ್ಲಿರುವಾಗಲೇ ಮರಣ ಹೊಂದಿದ ಸರ್ಕಾರಿ ನೌಕರರುಗಳ ನಿವೃತ್ತಿ/ಕುಟುಂಬ ನಿವೃತ್ತಿ ವೇತನ ಸೌಲಭ್ಯಗಳನ್ನು ಪರಿಷ್ಕರಿಸಲಾಗಿದ್ದು, ಸದರಿ ಆದೇಶದ ಕಂಡಿಕೆ-6 ರಲ್ಲಿ ಈ ಆದೇಶವು ಯುಜಿಸಿ/ಎಐಸಿಟಿಇ/ಐಸಿಎಆರ್ ಮತ್ತು ಎಫ್‌ಎನ್‌ಜೆಪಿಸಿ ವೇತನ ಶ್ರೇಣಿಗಳಲ್ಲಿರುವ ಅಧಿಕಾರಿಗಳಿಗೆ ಅನ್ವಯಿಸುವುದಿಲ್ಲವೆಂದು ಹಾಗೂ ಅವರುಗಳಿಗೆ ದಿನಾಂಕ: 1.7.2005ರ ಮುಂಚಿತವಾಗಿ ಜಾರಿಯಲ್ಲಿರುವ ನಿಯಮಗಳು ಅನ್ವಯಿಸುವುದು ಎಂದು ಆದೇಶಿಸಲಾಗಿರುತ್ತದೆ.

ಮೇಲೆ (2) (3) ಮತ್ತು (4) ರಲ್ಲಿ ಕ್ರಮವಾಗಿ ಓದಲಾದ ದಿನಾಂಕ 24.12.2010, 24.03.2010 ಮತ್ತು ದಿನಾಂಕ: 24.05.2010ರ ಸರ್ಕಾರಿ ಆದೇಶಗಳಲ್ಲಿ ಯುಜಿಸಿ/ಐಸಿಎಆರ್ ವೇತನ ಶ್ರೇಣಿಯಲ್ಲಿರುವ ಬೋಧಕ ಮತ್ತು ಸಮಾನ ವರ್ಗದವರಿಗೆ 2006ರ ಪರಿಷ್ಕೃತ ಯುಜಿಸಿ/ ಐಸಿಎಆರ್ ವೇತನ ಶ್ರೇಣಿಗಳನ್ನು ದಿನಾಂಕ: 1.1.2006ರಿಂದ ಜಾರಿಗೆ ಬರುವಂತೆ ವಿಸ್ತರಿಸಲಾಗಿದೆ.

ಮೇಲಿನಂತೆ ದಿನಾಂಕ: 01.07.2005ಕ್ಕೂ ಮುಂಚೆ ಸೇವೆಯಿಂದ ನಿವೃತ್ತರಾದ ಅಥವಾ ಸೇವಾವಧಿಯಲ್ಲಿರುವಾಗಲೇ ಮರಣ ಹೊಂದಿದ ಸರ್ಕಾರಿ ನೌಕರರ ಪಿಂಚಣಿ ಮತ್ತು ಕುಟುಂಬ ಪಿಂಚಣಿಯನ್ನು ಪರಿಷ್ಕರಿಸಿದ ಹಿನ್ನೆಲೆಯಲ್ಲಿ ಮತ್ತು ಯುಜಿಸಿ/ಐಸಿಎಆರ್ ವೇತನ ಶ್ರೇಣಿಯಲ್ಲಿರುವ ಬೋಧಕ ಮತ್ತು ಸಮಾನ ವರ್ಗದವರಿಗೆ 2006ರ ಪರಿಷ್ಕೃತ ಯುಜಿಸಿ/ ಐಸಿಎಆರ್ ವೇತನ ಶ್ರೇಣಿಗಳನ್ನು ದಿನಾಂಕ: 1.1.2006ರಿಂದ ಜಾರಿಗೆ ಬರುವಂತೆ ವಿಸ್ತರಿಸಿರುವ ಹಿನ್ನೆಲೆಯಲ್ಲಿ ಯುಜಿಸಿ/ ಐಸಿಎಆರ್/ಎಐಸಿಟಿಇ ವೇತನ ಶ್ರೇಣಿಯಲ್ಲಿ ವೇತನ ಪಡೆದು ದಿನಾಂಕ: 1.7.2005 ರಿಂದ 31.12.2005ರವರೆಗಿನ ಅವಧಿಯಲ್ಲಿ ನಿವೃತ್ತರಾದವರಿಗೆ ಮತ್ತು ಈ ಅವಧಿಯಲ್ಲಿ ಸೇವೆಯಲ್ಲಿರುವಾಗಲೇ ಮರಣ ಹೊಂದಿದವರಿಗೆ ಪರಿಷ್ಕೃತ ಪಿಂಚಣಿ ಸೌಲಭ್ಯಗಳು ಅಥವಾ 2006ರ ಪರಿಷ್ಕೃತ ಯುಜಿಸಿ/ಐಸಿಎಆರ್/ಎಐಸಿಟಿಇ ವೇತನದ ಸೌಲಭ್ಯಗಳು ದೊರಕದೆ ಇರುವುದರಿಂದ

ಇವರುಗಳಿಗೆ ಸ್ವಲ್ಪಮಟ್ಟಿಗೆ ಪರಿಹಾರವನ್ನು ನೀಡುವ ಬಗ್ಗೆ ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ (ವಿಶೇಷ) 09 ಪಿಇಎನ್ 2010,**

**ಬೆಂಗಳೂರು, ದಿನಾಂಕ:4ನೇ ನವೆಂಬರ್ 2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಯುಜಿಸಿ/ಐಸಿಎಆರ್/ಎಐಸಿಟಿಇ ವೇತನ ಶ್ರೇಣಿಯಲ್ಲಿ ವೇತನ ಪಡೆದು ದಿನಾಂಕ: 1.07.2005 ರಿಂದ 31.12.2005ರ ಅವಧಿಯಲ್ಲಿ ನಿವೃತ್ತರಾದ ಮತ್ತು ಈ ಅವಧಿಯಲ್ಲಿ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಬೋಧಕರಿಗೆ ಮತ್ತು ಸಮಾನ ವರ್ಗದವರಿಗೆ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ (ವಿ) 3 ಪಿಇಎನ್ 2007(11) ದಿನಾಂಕ 6.6.2007ರಲ್ಲಿ ಪರಿಷ್ಕರಿಸಿದ ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ವೇತನದ ಸೌಲಭ್ಯವನ್ನು ಈ ಆದೇಶದಲ್ಲಿನ ಕಂಡಿಕೆ 2.1ರ (iv) ಷರತ್ತನ್ನು ಹೊರತುಪಡಿಸಿ ಇತರೆ ಎಲ್ಲಾ ಷರತ್ತುಗಳು ಯಾವ ಬದಲಾವಣೆ ಇಲ್ಲದೆ ಅನ್ವಯವಾಗುವಂತೆ ವಿಸ್ತರಿಸಲಾಗಿದೆ.

ದಿನಾಂಕ: 1.7.2005 ರಿಂದ ಜಾರಿಗೆ ತರಲಾದ ಪಿಂಚಣಿ ಪರಿಷ್ಕರಣೆಯಿಂದಾಗಿ ದಿನಾಂಕ: 1.4.2006 ರಿಂದ ಲಭ್ಯವಾಗುವ ಪರಿಷ್ಕೃತ ತುಟ್ಟಿಭತ್ಯೆ ದರಗಳು ಕೆಳಗಿನಂತಿದೆ.

| | |
|---|---|
| 01.04.2006 | ಮೂಲ ಪಿಂಚಣಿಯ ಶೇ.2.625 ರಷ್ಟು |
| 01.07.2006 | ಮೂಲ ಪಿಂಚಣಿಯ ಶೇ.7.00 ರಷ್ಟು |
| 01.01.2007 | ಮೂಲ ಪಿಂಚಣಿಯ ಶೇ.12.25 ರಷ್ಟು |
| 01.07.2007 | ಮೂಲ ಪಿಂಚಣಿಯ ಶೇ.17.5 ರಷ್ಟು |
| 01.01.2008 | ಮೂಲ ಪಿಂಚಣಿಯ ಶೇ.22.75 ರಷ್ಟು |
| 01.07.2008 | ಮೂಲ ಪಿಂಚಣಿಯ ಶೇ.26.75 ರಷ್ಟು |
| 01.01.2009 | ಮೂಲ ಪಿಂಚಣಿಯ ಶೇ.32.75 ರಷ್ಟು |
| 01.07.2009 | ಮೂಲ ಪಿಂಚಣಿಯ ಶೇ.38 ರಷು |
| 01.01.2010 | ಮೂಲ ಪಿಂಚಣಿಯ ಶೇ.46 ರಷು |
| 01.07.2010 | ಮೂಲ ಪಿಂಚಣಿಯ ಶೇ.56.25 ರಷ್ಟು |

ಈ ಆದೇಶದನ್ವಯ ಲಭ್ಯವಾಗುವ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯ ಹೆಚ್ಚಳದ ಆರ್ಥಿಕ ಸೌಲಭ್ಯವು ದಿನಾಂಕ: 1.4.2006 ರಿಂದ ಪ್ರಾಪ್ತವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶದ ಮೇರೆಗೆ
ಮತ್ತು ಅವರ ಹೆಸರಿನಲ್ಲಿ,

(ಪದ್ಮಾವತಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)

ಗೆ:

1. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು,

2. ಮಹಾಲೇಖಪಾಲರು (ಕಂದಾಯ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು,
3. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು,
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು,
6. ಸರ್ಕಾರದ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ/ಕೃಷಿ ಮತ್ತು ತೋಟಗಾರಿಕೆ ಇಲಾಖೆ/ಕಾನೂನು ಇಲಾಖೆ,
7. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ)/ (ಆಯವ್ಯಯ ಮತ್ತು ಸಂಪನ್ಮೂಲ)
8. ಸರ್ಕಾರದ ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ,
9. ನಿರ್ದೇಶಕರು, ರಾಜ್ಯ ಖಜಾನೆ ಇಲಾಖೆ, ಬೆಂಗಳೂರು,
10. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು,
11. ಶಾಖಾ ರಕ್ಷಕ ಕಡತ/ವಾರದ ರಾಜ್ಯಪತ್ರ.

**PROCEEDINGS OF THE GOVERNMENT OF KARNATAKA**

Sub:- Revision of pension to the pensioners who were drawing pay in the UGC/ICAR/AICTE pay scales and who retired between 01.07.2005 to 31.12.2005.

Read:- 1. Govt.Order No.FD (Spl) 03 PEN 2007 (11) dated 06.06.2007
2. Govt.Order No. ED 37 UNE 2009 dated 24.12.2009.
3. Govt.Order No.AHD 64 AUM 2009 dated 24.03.2010.
4. Govt.Order No.AHF 106 VET 2009 dated 24.05.2010.

---

**Preamble**:-

In the Govt.Order dated 06.06.2007 read at (1) above, as per the recommendation of the 5th Pay Commission Pension/Family pension benefits of the government servants who retired prior to 01.07.2005 and who retired or died while in service on are after 01.07.2005 has been revised, and in para 6 of the said order it has been clarified that this order is not applicable to the officers who are drawing UGC/ICAR/AICTE and FNJPC pay scales and that the rules prior to 01.07.2005 are applicable to them.

In the Govt.Orders dated 24.12.2010, 24.03.2010 and 24.05.2010 read at (2) (3) (4) above the revised 2006 UGC/ICAR pay scales has been extended w.e.f. 1.1.2006 to the teaching and equivalent cadres drawing pay in the UGC/ICAR pay scales.

since the pension/family pension of the government servants who retired or died while in service prior to 01.07.2005 has been revised and since the 2006 UGC/ICAR pay scales have been extended w.e.f.1.1.2006 to the teaching and equivalent cadres drawing pay in the UGC/ICAR pay scales government has considered to give some relief to the persons who were drawing UGC/ICAR/AICTE pay scales and who have retired or died while in service from 01.07.2005 to 31.12.2005 and who did not get the revised pensionary benefits or revised UGC/ICAR/AICTE pay scale benefits of 2006, and has ordered as below:

GOVERNMENT ORDER NO. FD (Spl) 09 PEN 2010 ,
BANGALORE, DATED: 4th November 2010.

In view of the reasons stated in the preamble, pension/family pension

benefits as per the Govt.Order No.FD (Spl) 3 PEN 2007 (11) dated 06.06.2007 alongwith all conditions, except the condition specified in the parta 2.1 (iv) of the Govt.Order are extended to the persons of both teaching and equivalent cadres who were drawing pay in the UGC/ICAR/AICTE pay scales and who retired or died while in service during the period 01.07.2005 to 31.12.2005

Due to the revision of pension that came into force from 01.07.2005 the revised rates of D.A. payable from 01.04.2006 is as given below:

| | |
|---|---|
| 01.04.2006 | 2.625% of Basic Pension |
| 01.07.2006 | 7.00% of Basic Pension |
| 01.01.2007 | 12.25% of Basic Pension |
| 01.07.2007 | 17.5% of Basic Pension |
| 01.01.2008 | 22.75% of Basic Pension |
| 01.07.2008 | 26.75% of Basic Pension |
| 01.01.2009 | 32.75% of Basic Pension |
| 01.07.2009 | 38% of Basic Pension |
| 01.01.2010 | 46% of Basic Pension |
| 01.07.2010 | 56.25% of Basic Pension |

The Payment of increase in the revised pension/family pension as per this order shall be payable from 01.04.2006.

BY ORDER AND IN THE NAME OF THE
GOVERNOR OF KARNATAKA

(PADMAVATHI)
Special Officer Ex-officio,
Deputy Secretary to Government
Finance Department (Pension)

To

1) The Principal Accountant General (Civil & Commercial Audit) karnataka, Bangalore.
2) The Accountant General (Revenue Projects & Forest Audit), Karnataka, Bangalore.
3) The Accountant General (Accounts & Rights), Karnataka, Bangalore.
4) The Principal Secretaries/Secretaries of the Government of Karnataka, Education Department.

5) The Principal Secretaries/Secretaries of the Government of Karnataka.
6) The Additional /Joint/Deputy /Under Secretaries of the Government of Karnataka, Education Department/Agriculture and Horticulture Department/Law Department.
7) The Secretary to Government, Finance Department (Exp.)/(Budget & Resources).
8) The Deputy Secretary/Under Secretary to Government, Education Department.
9) The Director, State Treasury Department, Bangalore.
10) All District Treasury Officers.
11) Section guard file/Weekly Gazette.